ಸತ್ರ ಮೊಕದ್ದಮೆ ಸಂಖ್ಯೆ. 33/2022
ಫ್ರಾಸಾ-6

ದಿಃ 07.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ** ಎಸ್ ಸಿ ಹೆಚ್ **ವಕೀಲರಿಂದ 2** ರಿಂದ **4** ನೇ **ಆರೋಪಿ ಪರ**

ಘಟನೆ ಆಗಿದೆ ಎಂದು ಹೇಳುವ ದಿನ ನಾವು ಕನಕದಾಸ ವೃತ್ತದ ಬಳಿ ಇದ್ದಾಗ ನಮ್ಮ ಜೊತೆಯಲ್ಲಿ ಸುಮಾರು 7-8 ಜನ ಸಹ ಕುಳಿತುಕೊಂಡಿದ್ದರು. ಕನಕದಾಸ ವೃತ್ತದ ಬಳಿ ಅಲ್ಲಾಸಾಬನನ್ನು ನಾವು ನೋಡಿದಾಗ ಆತನು ಎಲ್ಲಿ ಹೋಗುತ್ತಿದ್ದನು ಎಂದು ನಾವು ವಿಚಾರ ಮಾಡಿರುವುದ್ಲಿ ಆದರೆ ಅಲ್ಲಾಸಾಬ ನಮಗೆ ಊಟ ಆಯಿತಾ ಎಂದು ಕೇಳಿದರು. ಅಲ್ಲಾಸಾಬ 1 ನೇ ಆರೋಪಿತನ ಮನೆಗೆ ಒಳಗೆ ಹೋದ ಸುಮಾರು 10-15 ನಿಮಿಷಗಳ ನಂತರ ಕೂಗಾಟದ ಶಬ್ಧ ಕೇಳಿಸಿರುತ್ತದೆ. 1 ನೇ ಆರೋಪಿ ವಾಸವಾಗಿರುವ ಮನೆ ಮಲ್ಲಿಗೆಹಾಳ ಮತ್ತು ಕರಡಿ ಗ್ರಾಮಳಿಗೆ ಹೋಗುವ ರಸ್ತೆಯ ಬಲಭಾಗಕ್ಕೆ ಬರುತ್ತದೆ ಎಂದರೆ ಸರಿ. ಸದರಿ 1 ನೇ ಆರೋಪಿಯ ಅಕ್ಕಪಕ್ಕದಲ್ಲಿ ಬೇರೆ ಮನೆಗಳು ಇರುತ್ತವೆ ಎಂದರೆ ಸರಿ. ನಾವು 1 ನೇ ಆರೋಪಿತನ ಮನೆಯಿಂದ ಕೂಗಾಟದ ಶಬ್ದ ಕೇಳಿದಾಗ ನಮ್ಮ ಜೊತೆ ಊರಿನವರು ಸಹ 1 ನೇ ಆರೋಪಿ ಮನೆಯ ಬಳಿ ಬಂದಿರುತ್ತಾರೆ. ಎಷ್ಟು ಜನರು ಸ್ಥಳಕ್ಕೆ ಬಂದಿದ್ದರು ಎಂದು ನನಗೆ ಈಗ ಹೇಳಲು ಆಗುವುದಿಲ್ಲ, ಆದರೆ ಅಲ್ಲಾಸಾಬನನ್ನು ಹೊಡೆಯುತ್ತಿರುವದನ್ನು ನೋಡಿ ನನ್ನ ಮಾವನ ಮನೆಗೆ ವಿಚಾರ ತಿಳಿಸಲು ಹೋಗಿರುತ್ತೇವೆ. ನಾವು ಅಲ್ಲಾಸಾಬನನ್ನು 1 ನೇ ಆರೋಪಿ ಮನೆಯಲ್ಲಿ ನೋಡಿದಾಗ ಅವರ ಮನೆಯಲ್ಲಿ ಸುಮಾರು 8 ಜನರು ಇದ್ದರು. ನಾವು ಅಲ್ಲಾಸಾಬನನ್ನು ಮನೆಯ ಒಳಗೆ ಹೊಡೆಯುವದನ್ನು ನೋಡಿ ಬಿಡಿಸಿಕೊಳ್ಳಲು ಹೋಗಲಿಲ್ಲ ಮತ್ತು ಆರೋಪಿತರ ಕಡೆಯವರು ನಮ್ಮನ್ನು ಒಳಗೆ ಹೋಗಲು ಬಿಡಲಿಲ್ಲ. ಆ ಸಮಯದಲ್ಲಿ ನನ್ನ ಮತ್ತು ನನ್ನ ಅಣ್ಣ ಚಾಸಾ-14 ರವರ ಬಳಿ ಮೊಬೈಲ ಪೋನ ಇತ್ತು. ನಾವು ಸದರಿ ಸಮಯದಲ್ಲಿ ಕರೆ ಮಾಡಿ ಪೊಲೀಸರಿಗೆ ಮತ್ತು ನನ್ನ ಮಾವನ ಮನೆಯವರಿಗೆ ವಿಚಾರ ತಿಳಿಸಲು ಪ್ರಯತ್ನಿಸಿರುವುದಿಲ್ಲ ಆದರೆ ನಮ್ಮ ಮಾವನ ಮನೆಗೆ ಹೋಗಿ ಅಲ್ಲಾಸಾಬನನ್ನು

ಆರೋಪಿತರು ಹೊಡೆಯುತ್ತಿದ್ದ ಬಗ್ಗೆ ವಿಚಾರ ತಿಳಿಸಿರುತ್ತೇವೆ. ಸುಮಾರು 2-3 ನಿಮಿಷಗಳ ಕಾಲ 1 ನೇ ಆರೋಪಿತನ ಮನೆಯ ಬಳಿ ಇದ್ದು, ನಂತರ ನಮ್ಮ ಮಾವನ ಮನೆಗೆ ವಿಚಾರ ತಿಳಿಸಲು ಹೋಗಿರುತ್ತೇವೆ. ಆ ಸಮಯದಲ್ಲಿ ಊರಿನ ಜನರು 1 ನೇ ಆರೋಪಿತನ ಮನೆಯ ಬಳಿ ಇದ್ದರು. 1 ನೇ ಆರೋಪಿತನ ಮನೆಯಿಂದ ನಮ್ಮ ಮಾವನ ಮನೆಗೆ ಸುಮಾರು 100 ಮೀಟರ ಆಗುತ್ತದೆ ಸುಮಾರು 1-2 ನಿಮಿಷದಲ್ಲಿ ನಮ್ಮ ಮಾವನ ಮನೆಗೆ ಹೋಗಿರುತ್ತೇವೆ. ನನ್ನ ಬಳಿ ಮೋಟಾರ ಸೈಕಲ್ ಇರುವುದಿಲ್ಲ.

2. ವಿಚಾರ ತಿಳಿಸಿದ ನಂತರ ನಮ್ಮ ಮಾವನ ಮನೆಯವರೆಲ್ಲರೂ 1 ನೇ ಆರೋಪಿ ಮನೆಯ ಬಳಿ ಸುಮಾರು 5 ನಿಮಿಷದಲ್ಲಿ ಬಂದಿರುತ್ತಾರೆ. ನಾನೂ ಸಹ ಆ ಸಮಯಕ್ಕೆ 1 ನೇ ಆರೋಪಿ ಮನೆ ಬಳಿ ಬಂದಿರುತ್ತೇನೆ. ನಮ್ಮ ಮಾವನ ಮನೆಯವರೆಲ್ಲರೂ ಸಹ 1 ನೇ ಆರೋಪಿತನ ಮನೆ ಬಳಿ ಬಂದಿರುತ್ತಾರೆ. ನಾವು ಬಾಗಿಲನ್ನು ತಟ್ಟಲು ಹೋದಾಗ 2 ನೇ ಆರೋಪಿ/ಚಂದ್ರಪ್ಪ ಮನೆಯಿಂದ ಹೊರಗೆ ಬಂದು ನನ್ನ ಅತ್ತೆ/ಮಮ್ತಾಜ/ಪ್ರಾಸಾ-5 ಮತ್ತು ನನ್ನ ಅಜ್ಜಿ/ಚಾಸಾ-12/ಹಜರತಬಿ ರವರಿಗೆ ಹೊಡೆದಿರುತ್ತಾರೆ. 2 ನೇ ಆರೊಪಿ ಪ್ರಾಸಾ-5 ರವರಿಗೆ ಕೈಯಿಂದ ಹೊಡೆದಿರುತ್ತಾರೆ. ಮನೆಯ ಒಳಗೆ ಸಾಕಷ್ಟು ಜನ ಇದ್ದ ಕಾರಣದಿಂದ ನಾವು ಮನೆ ಒಳಗೆ ನುಗ್ಗಲು ಆಗಿರುವುದಿಲ್ಲ. ಮನೆಯ ಹೊರಗೆ ಇದ್ದವರು ನಮ್ಮ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿರುವುದಿಲ್ಲ. ನಾವು ಮನೆಯ ಕಿಟಕಿಯಿಂದ ಘಟನೆಯನ್ನು ಪೊಲೀಸರು ಘಟನಾ ಸ್ಥಳಕ್ಕೆ ಬರುವವರೆಗೂ ನೋಡಿರುತ್ತೇವೆ.

3. ನಾನು ಮೊದಲಬಾರಿ ಅಲ್ಲಾಸಾಬನನ್ನು ನೋಡಿದಾಗ ಆ ಸಮಯದಲ್ಲಿ ಅಲ್ಲಾಸಾಬ ಪಡಸಾಲೆಯಲ್ಲಿ ಇದ್ದನು. ಆ ಸಮಯದಲ್ಲಿ ಕಟ್ಟಿಗೆಯಿಂದ ಅಲ್ಲಾಸಾಬನ ಮೇಲೆ ಹಲ್ಲೆ ಮಾಡುತ್ತಿದ್ದರು. ಸದರಿ ಸಮಯದಲ್ಲಿ ಅಲ್ಲಾಸಾಬನಿಗೆ ರಕ್ತದ ಗಾಯಗಳು ಆಗಿದ್ದವು. ಸದರಿ ಸಮಯದಲ್ಲಿ 2 ನೇ ಆರೋಪಿ/ಚಂದ್ರಪ್ಪ ಮತ್ತು 3 ನೇ ಆರೋಪಿ/ಹನಮಪ್ಪ ಕಟ್ಟಿಗೆಯಿಂದ ಹೊಡೆಯುತ್ತಿದ್ದರು. ಸದರಿ ಸಮಯದಲ್ಲಿ 1 ನೇ ಆರೋಪಿ ಗ್ಯಾನಪ್ಪನ ಮಕ್ಕಳು ಎಲ್ಲಿ ಇದ್ದರು ಎಂದು ನಾನು ಗಮನಿಸಿರುವುದಿಲ್ಲ. 2 ಮತ್ತು

3 ನೇ ಆರೋಪಿತರು ಕಟ್ಟಿಗೆಯಿಂದ ಹೊಡೆದ ನಂತರ ಅಲ್ಲಾಸಾಬ ದನದ ಕೊಟ್ಟಿಗೆ ಬಳಿ ಬಿದ್ದಿರುತ್ತಾರೆ. ನಾವು ಮನೆ ಕಿಟಕಿಯಿಂದ ನೋಡಿದಾಗ 1 ನೇ ಆರೋಪಿ ಗ್ಯಾನಪ್ಪನ ಮಕ್ಕಳು ಎಲ್ಲಿ ಇದ್ದರು ಎಂದು ನಾನು ಗಮನಿಸಿರುವುದಿಲ್ಲ. ನಾನು ನಮ್ಮ ಮಾವನ ಮನೆಯವರನ್ನು 1 ನೇ ಆರೋಪಿ ಮನೆ ಬಳಿ ಕರೆದುಕೊಂಡು ಬಂದ ನಂತರ ಅಲ್ಲಾಸಾಬ ದನದ ಕೊಟ್ಟಿಗೆಯಲ್ಲಿ ಬಿದ್ದಿರುತ್ತಾನೆ. ಪೊಲೀಸರು ಘಟನಾ ಸ್ಥಳಕ್ಕೆ ಬಂದ ನಂತರ ಆರೋಪಿತರು ಎಲ್ಲರೂ ಮನೆಯಿಂದ ಓಡಿಹೋಗಿರುತ್ತಾರೆ. ಆರೋಪಿತರು ಯಾವ ದಿಕ್ಕಿಗೆ ಓಡಿ ಹೋದರು ಎಂದು ನಾನು ನೋಡಿರುವುದಿಲ್ಲ. ನಾವು ಆರೋಪಿತರನ್ನು ಹಿಡಿಯಲು ಪ್ರಯತ್ನಿಸಿರುವುದಿಲ್ಲ. ಪೊಲೀಸರು ಬಂದ ನಂತರ ನಾನು ಮನೆಯ ಒಳಗೆ ಹೋಗಿ ಅಲ್ಲಾಸಾಬನನ್ನು ನೋಡಿರುತ್ತೇನೆ. ಅಲ್ಲಾಸಾಬನ ಮೃತದೇಹವನ್ನು ಮರುದಿನ ಬೆಳಿಗ್ಗೆ ಸುಮಾರು 10-11 ಗಂಟೆಗೆ ಪೊಲೀಸರು ಸಾಗಿಸಿರುತ್ತಾರೆ. ಪೊಲೀಸರು ನಂತರ ನಮ್ಮೆಲ್ಲರನ್ನೂ ಮನೆಗೆ ಹೋಗುವಂತೆ ತಿಳಿಸಿ ಅವರು ಅಲ್ಲೆ ಉಳಿದುಕೊಂಡಿರುತ್ತಾರೆ.

4. ಮೃತ ಅಲ್ಲಾಸಾಬನನ್ನು ಊರಿನಿಂದ ಬೇರೆ ವಾಸವಾಗಿರಲು ಕಳುಹಿಸಿದ್ದರು ಎಂದರೆ ಸರಿ. ಮೃತ ಅಲ್ಲಾಸಾಬ, ರಂಜಾನಸಾಬ, ಅಮೀನಸಾಬ, ಮೌಲಾಸಾಬ ರವರೆಲ್ಲರಿಗೂ ಹೆಣ್ಣುಮಕ್ಕಳನ್ನು ಕಾಡಿಸುವ ವಿಚಾರವಾಗಿ ಆರೋಪಗಳು ಇದ್ದವು ಎಂದರೆ ಸರಿಯಲ್ಲ. ಮೃತ ಅಲ್ಲಾಸಾಬ ಯಾವುದಾದರೂ ಮನೆಯಲ್ಲಿ ಒಬ್ಬರೆ ಹೆಣ್ಣು ಮಗಳು ಇದ್ದಾಳೆ ಎಂದು ತಿಳಿದರೆ ಅವರ ಮನೆಗೆ ನುಗ್ಗಿ ಹೆಣ್ಣು ಮಗಳ ಮೇಲೆ ಅತ್ಯಾಚಾರ ಮಾಡುತ್ತಿದ್ದನು, ಈ ವಿಚಾರವಾಗಿ ಸದರಿ ಹೆಣ್ಣು ಮಕ್ಕಳು ಸಂಸಾರ ಹಾಳು ಆಗುತ್ತದೆ ಎಂದು ಯಾರಿಗೂ ಹೇಳಿಕೊಳ್ಳದೆ ಇದ್ದುದ್ದನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ. ನನ್ನ ಮಾವ ಅಮೀನಸಾಬ ಒಬ್ಬ ಹೆಣ್ಣು ಮಗಳ ಮೇಲೆ ಅತ್ಯಾಚಾರ ಮಾಡಿದ ವಿಚಾರವಾಗಿ ಊರಿನವರು ಹೊಡೆದು ಆತನನ್ನು ಸಹ ಊರಿನಿಂದ ಹೊರಗೆ ಹಾಕಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಮತ್ತೊಬ್ಬ ಮಾವ ಮೌಲಾಸಾಬ ಸಹ ಮಲ್ಲಪ್ಪ ಪೂಜಾರಿ ಎನ್ನುವವರ ಹೆಂಡತಿ ಜೊತೆಗೆ ಅಸಭ್ಯ ವರ್ತಿಸಿದ್ದರಿಂದ ಆತನಿಗೂ ಸಹ ಊರಿನ ಜನ ಹೊಡೆದಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಮಾವ

ರಂಜಾನಸಾಬ ಬಸಮ್ಮ ಕುರಿ ಎನ್ನುವವಳ ಜೊತೆ ಅಸಭ್ಯವಾಗಿ ವರ್ತಿಸಿದ್ದರಿಂದ ಊರಿನವರು ಹೊಡೆದಿದ್ದರು ಎಂದರೆ ಸರಿಯಲ್ಲ.

5. ನನ್ನ ಮಾವ ಅಲ್ಲಾಸಾಬ 1 ನೇ ಆರೋಪಿತನ ಮನೆಗೆ ನೀರು ಕೇಳುವಂತೆ ಹೋಗಿ ಮನೆ ಒಳಗೆ ನುಗ್ಗಿ ಚಾಸಾ-6/ರೇಣುಕಾ ರವರ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಿಸಿದಾಗ ಚಾಸಾ-6/ರೇಣುಕಾ ಅಲ್ಲಾಸಾಬನಿಗೆ ನೂಕಿದಾಗ ಆತ ಕೆಳಗೆ ಬಿದ್ದು ಪೆಟ್ಟು ಮಾಡಿಕೊಂಡು ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ದನದ ಕೊಟ್ಟಿಗೆ ಇದ್ದ ಸ್ಥಳದಲ್ಲಿ ಒರಟು ಕಲ್ಲುಗಳು ಇದ್ದ ಕಾರಣದಿಂದ ತಲೆಗೆ ಪೆಟ್ಟಾಗಿ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಮಾವ ಅಲ್ಲಾಸಾಬ ದೈಹಿಕವಾಗಿ ಸದೃಢನಿದ್ದನು ಎಂದರೆ ಸರಿ. ನನ್ನ ಮಾವನ ಸಾವನ್ನು ದುರುಪಯೋಗ ಪಡಿಸಿಕೊಂಡು ಆರೋಪಿತರ ಮೇಲೆ ಸುಳ್ಳು ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ನಾವು 1 ನೇ ಆರೋಪಿ ಮನೆ ಬಳಿ ಹೋಗಿರುವುದಿಲ್ಲ ಹಾಗೂ ಯಾವುದೇ ಘಟನೆಯನ್ನು ಮನೆ ಕಿಟಕಿಯಿಂದ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಾವು ಆರೋಪಿತರಿಗೆ ಅಲ್ಲಾಸಾಬನನ್ನು ಬಿಟ್ಟುಬಿಡುವಂತೆ ಕೇಳಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಆ ಸಮಯದಲ್ಲಿ ಮನೆಯ ಒಳಗಿನಿಂದ ನಿಮ್ಮ ಮನೆ ಹೆಣ್ಣು ಮಕ್ಕಳಿಗೆ ಈ ರೀತಿ ಮಾಡಿದರೆ ಸುಮ್ಮನಿರುತ್ತಿದ್ದೀರಾ ಮಕ್ಕಳೆ ಎಂದು ಅವಾಚ್ಯವಾಗಿ ಬೈದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-14 ರವರು ನನ್ನ ಮಾವ ಮತ್ತು ಅವರ ಮನೆಯವರಿಗೆ ಆರೋಪಿತರು ಅಲ್ಲಾಸಾಬನಿಗೆ ಹಲ್ಲೆ ಮಾಡುತ್ತಿದ್ದ ವಿಚಾರವನ್ನು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಹೊಡೆಬಡಿ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಘಟನೆಯನ್ನು ನೋಡದೆ ಇದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(1 ನೇ ಆರೋಪಿ ಪರ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ)**

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.

ದಿಃ 07.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ** ಎಸ್ ಸಿ ಹೆಚ್ **ವಕೀಲರಿಂದ 2** ರಿಂದ **4** ನೇ **ಆರೋಪಿ ಪರ**

ನನ್ನ ಮಾವ ಹುಸೇನಸಾಬ ರವರಿಗೆ ಒಟ್ಟು 6 ಜನ ಮಕ್ಕಳು ಎಂದರೆ ಸರಿ. ಮೃತ ಅಲ್ಲಾಸಾಬ ರವರಿಗೆ ಮದುವೆ ಆಗಿ, ಎರಡು ಮಕ್ಕಳು ಇದ್ದರು. ಅಲ್ಲಾಸಾಬ ರವರ ಹೆಂಡತಿ ಚಾಸಾ-16/ಸಹಿರಾಬೇಗಂ ಗಂಡನ ಸೋದರ ಅತ್ತೆ ಮಗಳು. ನಾವು ವಾಸವಾಗಿರುವ ನಮ್ಮ ಮನೆ ಇಲಕಲ್ಲದಿಂದ ನಮ್ಮ ಊರಿಗೆ ಬರುವ ಆರಂಭದಲ್ಲಿ ಬರುತ್ತದೆ ಎಂದರೆ ಸರಿ. ಕನಕದಾಸ ವೃತ್ತ ನಮ್ಮ ಮನೆಯಿಂದ ಸುಮಾರು 100 ಮೀಟರ ಅಂತರದಲ್ಲಿ ಇರಬಹುದು. 1 ನೇ ಆರೋಪಿ ವಾಸವಾಗಿರುವ ಮನೆ ಮಲ್ಲಿಗೆಹಾಳ ಮತ್ತು ಕರಡಿ ಗ್ರಾಮಳಿಗೆ ಹೋಗುವ ರಸ್ತೆಯ ಬಲಭಾಗಕ್ಕೆ ಬರುತ್ತದೆ ಎಂದರೆ ಸರಿ. 1 ನೇ ಆರೋಪಿ/ಗ್ಯಾನಪ್ಪ ಪೂಜಾರಿ ಮತ್ತು ಆತನ ತಂದೆ 2 ನೇ ಆರೋಪಿ ಮತ್ತು ಉಳಿದ ಆರೋಪಿತರು ಬೇರೆ ಬೇರೆ ವಾಸವಾಗಿರುತ್ತಾರೆ ಎಂದರೆ ಸರಿ. 1 ನೇ ಆರೋಪಿ/ಗ್ಯಾನಪ್ಪ ಪೂಜಾರಿ ತನ್ನ ತಂದೆ 2 ನೇ ಆರೋಪಿ/ಚಂದ್ರಪ್ಪ ಪೂಜಾರಿ ಜೊತೆಯಲ್ಲಿ ಜಗಳವಾಡಿಕೊಂಡು ತನ್ನ ಹೆಂಡತಿ ಮಕ್ಕಳೊಂದಿಗೆ ಬೇರೆ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. 1 ನೇ ಆರೋಪಿಗೆ 3 ಜನ ಮಕ್ಕಳು ಎಂದರೆ ಸರಿ. 1 ನೇ ಆರೋಪಿ ಮನೆ ಕನಕದಾಸ ವೃತ್ತದಿಂದ 3 ಮನೆ ಅಂತರದಲ್ಲಿ ಇರುತ್ತದೆ ಎಂದರೆ ಸರಿ. 1 ನೇ ಆರೋಪಿ ವಾಸವಾಗಿದ್ದ ಮನೆಯ ಒಳಗೆ ಮೊದಲು ದನದ ಕೊಟ್ಟಿಗೆ, ನಂತರ ಪಡಸಾಲೆ, ನಂತರ ಅಡುಗೆ ಮನೆ ಇರುತ್ತದೆ ಎಂದರೆ ಸರಿ. ಸದರಿ ದನದಕೊಟ್ಟಿಗೆಯಲ್ಲಿ ಒಂದು ಮಂಚ ಇದ್ದು ಸದರಿ ದನದ ಕೊಟ್ಟಿಗೆಯ ಸುಮಾರು ಅರ್ಧ ಭಾಗವನ್ನು ಆವರಿಸಿಕೊಂಡಿರುತ್ತದೆ ಎಂದರೆ ಸರಿ. ಸದರಿ ದನದ ಕೊಟ್ಟಿಗೆಯಲ್ಲಿ ದನ ಕಟ್ಟಲು ಎರಡು ಕೊಂಡಿ ಇರುತ್ತವೆ ಎಂದರೆ ಸರಿ. ಸದರಿ ಕೊಟ್ಟಿಗೆಯಲ್ಲಿ ಒಂದು ಮಂಚವನ್ನು ಇಡಲಾಗಿದ್ದರಿಂದ ಸ್ವಲ್ಪ ಸ್ಥಳ ಮಾತ್ರ ಉಳಿದಿತ್ತು ಎಂದರೆ ಸರಿಯಲ್ಲ.

2. ಮೃತ ಅಲ್ಲಾಸಾಬನನ್ನು ಊರಿನಿಂದ ನಾವೇ ಬೇರೆ ವಾಸವಾಗಿರಲು ಕಳುಹಿಸಿದ್ದೆವು ಎಂದರೆ ಸರಿ. ಮೃತ ಅಲ್ಲಾಸಾಬ, ರಂಜಾನಸಾಬ, ಅಮೀನಸಾಬ, ಮೌಲಾಸಾಬ ರವರೆಲ್ಲರಿಗೂ ಹೆಣ್ಣುಮಕ್ಕಳನ್ನು ಕಾಡಿಸುವ ವಿಚಾರವಾಗಿ ಆರೋಪಗಳು ಇದ್ದವು ಎಂದರೆ ಸರಿಯಲ್ಲ. ಮೃತ ಅಲ್ಲಾಸಾಬ ಯಾವುದಾದರೂ ಮನೆಯಲ್ಲಿ ಒಬ್ಬರೆ ಹೆಣ್ಣು ಮಗಳು ಇದ್ದಾಳೆ ಎಂದು ತಿಳಿದರೆ ಅವರ ಮನೆಗೆ ನುಗ್ಗಿ ಹೆಣ್ಣು ಮಗಳ ಮೇಲೆ ಅತ್ಯಾಚಾರ ಮಾಡುತ್ತಿದ್ದನು, ಈ ವಿಚಾರವಾಗಿ ಸದರಿ ಹೆಣ್ಣು ಮಕ್ಕಳು ಸಂಸಾರ ಹಾಳು ಆಗುತ್ತದೆ ಎಂದು ಯಾರಿಗೂ ಹೇಳಿಕೊಳ್ಳದೆ ಇದ್ದುದ್ದನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ. ನನ್ನ ಮೈದುನ ಅಮೀನಸಾಬ ಒಬ್ಬ ಹೆಣ್ಣು ಮಗಳ ಮೇಲೆ ಅತ್ಯಾಚಾರ ಮಾಡಿದ ವಿಚಾರವಾಗಿ ಊರಿನವರು ಹೊಡೆದು ಆತನನ್ನು ಸಹ ಊರಿನಿಂದ ಹೊರಗೆ ಹಾಕಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಮತ್ತೊಬ್ಬ ಮೈದುನ ಮೌಲಾಸಾಬ ಸಹ ಮಲ್ಲಪ್ಪ ಪೂಜಾರಿ ಎನ್ನುವವರ ಹೆಂಡತಿ ಜೊತೆಗೆ ಅಸಭ್ಯ ವರ್ತಿಸಿದ್ದರಿಂದ ಆತನಿಗೂ ಸಹ ಊರಿನ ಜನ ಹೊಡೆದಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಗಂಡ ರಂಜಾನಸಾಬ ಬಸಮ್ಮ ಕುರಿ ಎನ್ನುವವಳ ಜೊತೆ ಅಸಭ್ಯವಾಗಿ ವರ್ತಿಸಿದ್ದರಿಂದ ಊರಿನವರು ಹೊಡೆದಿದ್ದರು ಎಂದರೆ ಸರಿಯಲ್ಲ.

3. ನಮ್ಮ ಊರಿನ ಕನಕದಾಸ ವೃತ್ತದಲ್ಲಿ ಸಾಮಾನ್ಯವಾಗಿ ರಾತ್ರಿ ಸಮಯದಲ್ಲಿ ಜನರ ಸಂಚಾರ ಇರುತ್ತದೆ ಎಂದರೆ ಸರಿ. 1 ನೇ ಆರೋಪಿತನ ಮನೆಯ ಅಕ್ಕಪಕ್ಕದಲ್ಲಿ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ಘಟನೆ ದಿನ ಮೃತ ಅಲ್ಲಾಸಾಬ ಮನೆಯಿಂದ ಸುಮಾರು 8-30 ಗಂಟೆಗೆ ಆಚೆ ಹೋಗಿರುತ್ತಾರೆ. ನಂತರ ನಮ್ಮ ಮನೆಯಿಂದ ಮೃತ ಅಲ್ಲಾಸಾಬನಿಗೆ ರಾತ್ರಿ ಸುಮಾರು 10 ಗಂಟೆ ಸಮಯಕ್ಕೆ ಕರೆ ಮಾಡಿದಾಗ ಅಲ್ಲಾಸಾಬ ನಂತರ ಬರುತ್ತೇನೆ ಮಲಗಿಕೊಳ್ಳಿ ಎಂದು ನಮ್ಮ ಮನೆಯವರಿಗೆ ತಿಳಿಸಿದ್ದನು. ನಂತರ ನಾವು ಮನೆ ಬಾಗಿಲು ಹಾಕಿಕೊಂಡು ಮನೆಯಲ್ಲಿ ಮಲಗಿಕೊಂಡೆವು. ಸುಮಾರು 10-11 ಗಂಟೆಗೆ ಚಾಸಾ-14 ಮತ್ತು 15 ರವರು ಮನೆಗೆ ಬಂದು ಅಲ್ಲಾಸಾಬನ ಮೇಲೆ

ಆರೋಪಿತರು ಹಲ್ಲೆ ಮಾಡುತ್ತಿದ್ದಾರೆ ಎಂದು ವಿಚಾರ ತಿಳಿಸಿದರು. ವಿಚಾರ ತಿಳಿದು ಸುಮಾರು 5 ನಿಮಿಷದಲ್ಲಿ 1 ನೇ ಆರೋಪಿ ಮನೆಯ ಬಳಿ ನಾವೆಲ್ಲರೂ ಹೋಗಿರುತ್ತೇವೆ. ನಾವು 1 ನೇ ಆರೋಪಿ ಮನೆ ಬಳಿ ಹೋದಾಗ ನಮ್ಮ ಊರಿನ ಸುಮಾರು 40-50 ಜನರು 1 ನೇ ಆರೋಪಿಯ ಮನೆಯ ಬಳಿ ಇದ್ದರು. ನಾವು ಪೊಲೀಸರಿಗೆ ಕರೆ ಮಾಡಿ ಕರೆಸಿರುವುದಿಲ್ಲ. ಆದರೆ ಅಲ್ಲಿದ್ದವರಲ್ಲಿ ಒಬ್ಬರು ಪೊಲೀಸರಿಗೆ ಕರೆ ಮಾಡಿ ಕರೆಸಿರುತ್ತಾರೆ. ನಾವು ಮನೆಯ ಬಾಗಿಲನ್ನು ಒಡೆಯಲು ಪ್ರಯತ್ನಿಸಿರುವುದಿಲ್ಲ ಆದರೆ ಬಾಗಿಲನ್ನು ತಟ್ಟಿರುತ್ತೇವೆ. ಸುಮಾರು 5-10 ನಿಮಿಷ 1 ನೇ ಆರೋಪಿಯ ಮನೆಯ ಬಾಗಿಲನ್ನು ತಟ್ಟಿರುತ್ತೇವೆ. ಸುಮಾರು ಸಮಯ ನಾವು ಬಾಗಿಲನ್ನು ತಟ್ಟುತ್ತಾ ಅಲ್ಲಿಯೆ ಪೊಲೀಸರು ಬರುವವರೆಗೂ ಇದ್ದೆವು. ಸುಮಾರು 11 ಗಂಟೆಗೆ ಪೊಲೀಸರು 1 ನೆ ಆರೋಪಿ ಮನೆ ಬಳಿ ಬಂದಿರುತ್ತಾರೆ. ಪೊಲೀಸರು 1 ನೇ ಆರೋಪಿ ಮನೆ ಬಳಿ ಬಂದಾಗ ಆರೋಪಿತರು ಮನೆ ಬಾಗಿಲನ್ನು ತೆಗೆದು ಅಲ್ಲಿಂದ ಓಡಿ ಹೋಗಿರುತ್ತಾರೆ. ನಾವು ಆರೋಪಿತರನ್ನು ಹಿಡಿಯಲು ಪ್ರಯತ್ನಿಸಿರುವುದಿಲ್ಲ. ಆರೋಪಿತರಲ್ಲಿ ಕೆಲವರು ಕನಕದಾಸ ವೃತ್ತದ ಕಡೆಗೆ ಓಡಿಹೋಗಿರುತ್ತಾರೆ ಮತ್ತು ಕೆಲವರು ಮಲ್ಲಿಗೆಹಾಳ ರಸ್ತೆ ಕಡೆಗೆ ಓಡಿ ಹೋಗಿರುತ್ತಾರೆ. ಆರೋಪಿತರಲ್ಲಿ ಯಾರು ಯಾವ ಕಡೆ ಓಡಿ ಹೋದರು ಎಂದು ನನಗೆ ಈಗ ನೆನಪಿಲ್ಲ. ಮನೆ ಬಾಗಿಲು ಹಾಕಿದ್ದರಿಂದ ಬಾಗಿಲ ಬಳಿ ನಿಂತು ನೋಡಿದರೆ ಏನೂ ಕಾಣಿಸುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಮನೆ ಕಿಟಕಿಯಿಂದ ಘಟನೆ ನೋಡಿರುತ್ತೇವೆ ಎಂದು ನುಡಿದಿರುತ್ತಾರೆ. ಊರಿನವರು ಸಹ ಮನೆಯ ಕಿಟಕಿ ಬಳಿ ನಿಂತಿದ್ದರು. .

4. ನಾವು ಕಿಟಕಿಯಿಂದ ನೋಡಿದಾಗ ಅಲ್ಲಾಸಾಬ ದನದ ಕೊಟ್ಟಿಗೆಯಲ್ಲಿ ಬಿದ್ದಿದ್ದನು. ನಾವು ಕಿಟಕಿಯಿಂದ ನೋಡಿದಾಗ ಅಲ್ಲಾಸಾಬ ಮೃತಪಟ್ಟಿದ್ದನು. ಆ ಸಮಯದಲ್ಲಿ 1 ನೇ ಆರೋಪಿ/ಗ್ಯಾನಪ್ಪ ದನದ ಕೊಟ್ಟಿಗೆಯಲ್ಲಿ ನಿಂತಿದ್ದನು. ಪೊಲೀಸರು ಘಟನಾ ಸ್ಥಳಕ್ಕೆ ಬಂದ ನಂತರ ನಾನು ಅಲ್ಲಾಸಾಬ ರವರ ಬಳಿ ಹೋಗಿರುವುದಿಲ್ಲ. ನಾನು ಮನೆಯ ಒಳಗೆ

ಪೊಲೀಸರು ಬಂದ ನಂತರ ಹೋಗಿರುವುದಿಲ್ಲ. ಸದರಿ ದಿನ ನಾವು ಮನೆಗೆ ವಾಪಸ್ಸು ಬಂದಿರುತ್ತೇವೆ.

5. ಚಾಸಾ-17/ಹಸನಸಾಬ ರವರು ಮರುದಿನ ಬೆಳಿಗ್ಗೆ ಸುಮಾರು 11 ಗಂಟೆಗೆ ಬಂದಿರುತ್ತಾರೆ. ಚಾಸಾ-17 ರವರು ಹೇಳಿದಂತೆ ದೂರನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ನಾವು 1 ನೇ ಆರೋಪಿ ಮನೆ ಬಳಿ ಹೋಗಿದ್ದಾಗ ಚಾಸಾ-6/ರೇಣವ್ವ ಮತ್ತು ಆಕೆಯ ಮಕ್ಕಳು ಸಹ ಮನೆಯ ಒಳಗಡೆ ಇದ್ದರು. ಚಾಸಾ-6/ರೇಣವ್ವ ರವರಿಗೆ ತಲೆ ಮೇಲೆ ಆ ಸಮಯದಲ್ಲಿ ಪೆಟ್ಟಾಗಿತ್ತು.

6. ನನ್ನ ಮೈದುನ ಅಲ್ಲಾಸಾಬ 1 ನೇ ಆರೋಪಿತನ ಮನೆಗೆ ನೀರು ಕೇಳುವಂತೆ ಹೋಗಿ ಮನೆ ಒಳಗೆ ನುಗ್ಗಿ ಚಾಸಾ-6/ರೇಣುಕಾ ರವರ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಿಸಿದಾಗ ಚಾಸಾ-6/ರೇಣುಕಾ ಅಲ್ಲಾಸಾಬನಿಗೆ ನೂಕಿದಾಗ ಆತ ಕೆಳಗೆ ಬಿದ್ದು ಪೆಟ್ಟು ಮಾಡಿಕೊಂಡು ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ದನದ ಕೊಟ್ಟಿಗೆ ಇದ್ದ ಸ್ಥಳದಲ್ಲಿ ಒರಟು ಕಲ್ಲುಗಳು ಇದ್ದ ಕಾರಣದಿಂದ ತಲೆಗೆ ಪೆಟ್ಟಾಗಿ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಮೈದುನ ಅಲ್ಲಾಸಾಬ ದೈಹಿಕವಾಗಿ ಸದೃಢನಿದ್ದನು ಎಂದರೆ ಸರಿ. ನನ್ನ ಮೈದುನನ ಸಾವನ್ನು ದುರುಪಯೋಗ ಪಡಿಸಿಕೊಂಡು ಆರೋಪಿತರ ಮೇಲೆ ಸುಳ್ಳು ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಚಾಸಾ-14 ಮತ್ತು 15 ರವರು ನಮ್ಮ ಮನೆಗೆ ಬಂದು ಆರೋಪಿತರು ಅಲ್ಲಾಸಾಬನಿಗೆ ಹೊಡೆಯುತ್ತಿದ್ದ ವಿಚಾರ ನಮಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವು 1 ನೇ ಆರೋಪಿ ಮನೆ ಬಳಿ ಹೋಗಿರುವುದಿಲ್ಲ ಹಾಗೂ ಯಾವುದೇ ಘಟನೆಯನ್ನು ಮನೆ ಕಿಟಕಿಯಿಂದ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಾವು ಆರೋಪಿತರಿಗೆ ಅಲ್ಲಾಸಾಬನನ್ನು ಬಿಟ್ಟುಬಿಡುವಂತೆ ಕೇಳಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಆ ಸಮಯದಲ್ಲಿ ಮನೆಯ ಒಳಗಿನಿಂದ ನಿಮ್ಮ ಮನೆ ಹೆಣ್ಣು ಮಕ್ಕಳಿಗೆ ಈ ರೀತಿ ಮಾಡಿದರೆ ಸುಮ್ಮನಿರುತ್ತಿದ್ದೀರಾ ಮಕ್ಕಳೆ ಎಂದು ಅವಾಚ್ಯವಾಗಿ ಬೈದಿರುತ್ತಾರೆ ಎಂದು

ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಅಲ್ಲಾಸಾಬನಿಗೆ ಸಲಿಕೆಯಿಂದ ಹಾಗೂ 2 ಮತ್ತು 3 ನೇ ಆರೋಪಿತರು ಕಟ್ಟಿಗೆಯಿಂದ ಹೊಡೆದಿರುತ್ತಾರೆ ಹಾಗೂ ಉಳಿದ ಆರೋಪಿತರು ಕೈ-ಕಾಲುಗಳಿಂದ ಹೊಡಿಬಡಿ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಘಟನೆಯನ್ನು ನೋಡದೆ ಇದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(1 ನೇ ಆರೋಪಿ ಪರ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ)**

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.

ಸತ್ರ ಮೊಕದ್ದಮೆ ಸಂಖ್ಯೆ. 33/2022
ಪ್ರಾಸಾ-1

ದಿಃ 07.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ** ಎಸ್ ಸಿ ಹೆಚ್ **ವಕೀಲರಿಂದ 2** ರಿಂದ **4** ನೇ **ಆರೋಪಿ ಪರ**

ನನ್ನ ತಂದೆ ಹುಸೇನಸಾಬ ರವರಿಗೆ ನಾವು ಒಟ್ಟು 6 ಜನ ಮಕ್ಕಳು ಎಂದರೆ ಸರಿ. ಮೃತ ಅಲ್ಲಾಸಾಬ ರವರಿಗೆ ಮದುವೆ ಆಗಿ, ಎರಡು ಮಕ್ಕಳು ಇದ್ದರು. ಅಲ್ಲಾಸಾಬ ರವರ ಹೆಂಡತಿ ಚಾಸಾ-16/ಸಹಿರಾಬೇಗಂ ನನ್ನ ಸೋದರ ಅತ್ತೆ ಮಗಳು. ನಾವು ವಾಸವಾಗಿರುವ ನಮ್ಮ ಮನೆ ಇಲಕಲ್ಲದಿಂದ ನಮ್ಮ ಊರಿಗೆ ಬರುವ ಆರಂಭದಲ್ಲಿ ಬರುತ್ತದೆ ಎಂದರೆ ಸರಿ. ಕನಕದಾಸ ವೃತ್ತ ನಮ್ಮ ಮನೆಯಿಂದ ಸುಮಾರು 50 ಮೀಟರ ಅಂತರದಲ್ಲಿ ಇರುತ್ತದೆ. 1 ನೇ ಆರೋಪಿ ವಾಸವಾಗಿರುವ ಮನೆ ಮಲ್ಲಿಗೆಹಾಳ ಮತ್ತು ಕರಡಿ ಗ್ರಾಮಳಿಗೆ ಹೋಗುವ ರಸ್ತೆಯ ಬಲಭಾಗಕ್ಕೆ ಬರುತ್ತದೆ ಎಂದರೆ ಸರಿ. 1 ನೇ ಆರೋಪಿ/ಗ್ಯಾನಪ್ಪ ಪೂಜಾಾರಿ ಮತ್ತು ಆತನ ತಂದೆ 2 ನೇ ಆರೋಪಿ ಮತ್ತು ಉಳಿದ ಆರೋಪಿತರು ಬೇರೆ ಬೇರೆ ವಾಸವಾಗಿರುತ್ತಾರೆ ಎಂದರೆ ಸರಿ. 1 ನೇ ಆರೋಪಿ/ಗ್ಯಾನಪ್ಪ ಪೂಜಾರಿ ತನ್ನ ತಂದೆ 2 ನೇ ಆರೋಪಿ/ಚಂದ್ರಪ್ಪ ಪೂಜಾರಿ ಜೊತೆಯಲ್ಲಿ ಜಗಳವಾಡಿಕೊಂಡು ತನ್ನ ಹೆಂಡತಿ ಮಕ್ಕಳೊಂದಿಗೆ ಬೇರೆ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. 1 ನೇ ಆರೋಪಿಗೆ 3 ಜನ ಮಕ್ಕಳು ಎಂದರೆ ಸರಿ. 1 ನೇ ಆರೋಪಿ ಮನೆ ಕನಕದಾಸ ವೃತ್ತದಿಂದ 3 ಮನೆ ಅಂತರದಲ್ಲಿ ಇರುತ್ತದೆ ಎಂದರೆ ಸರಿ. 1 ನೇ ಆರೋಪಿ ವಾಸವಾಗಿದ್ದ ಮನೆಯ ಒಳಗೆ ಮೊದಲು ದನದ ಕೊಟ್ಟಿಗೆ, ನಂತರ ಪಡಸಾಲೆ, ನಂತರ ಅಡುಗೆ ಮನೆ ಇರುತ್ತದೆ ಎಂದರೆ ಸರಿ. ಸದರಿ ದನದಕೊಟ್ಟಿಗೆಯಲ್ಲಿ ಒಂದು ಮಂಚ ಇದ್ದು ಸದರಿ ದನದ ಕೊಟ್ಟಿಗೆಯ ಸುಮಾರು ಅರ್ಧ ಭಾಗವನ್ನು ಆವರಿಸಿಕೊಂಡಿರುತ್ತದೆ ಎಂದರೆ ಸರಿ. ಸದರಿ ದನದ ಕೊಟ್ಟಿಗೆಯಲ್ಲಿ ದನ ಕಟ್ಟಲು ಎರಡು ಕೊಂಡಿ ಇರುತ್ತವೆ ಎಂದರೆ ಸರಿ. ಸದರಿ ಕೊಟ್ಟಿಗೆಯಲ್ಲಿ ಒಂದು ಮಂಚವನ್ನು ಇಡಲಾಗಿದ್ದರಿಂದ ಸ್ವಲ್ಪ ಸ್ಥಳ ಮಾತ್ರ ಉಳಿದಿತ್ತು ಎಂದರೆ ಸರಿಯಲ್ಲ.

2. ಮೃತ ಅಲ್ಲಾಸಾಬನನ್ನು ಊರಿನಿಂದ ನಾವೇ ಬೇರೆ ವಾಸವಾಗಿರಲು ಕಳುಹಿಸಿದ್ದೆವು ಎಂದರೆ ಸರಿ. ಮೃತ ಅಲ್ಲಾಸಾಬ, ರಂಜಾನಸಾಬ, ಅಮೀನಸಾಬ, ಮೌಲಾಸಾಬ ರವರೆಲ್ಲರಿಗೂ ಹೆಣ್ಣುಮಕ್ಕಳನ್ನು ಕಾಡಿಸುವ ವಿಚಾರವಾಗಿ ಆರೋಪಗಳು ಇದ್ದವು ಎಂದರೆ ಸರಿಯಲ್ಲ. ಮೃತ ಅಲ್ಲಾಸಾಬ ಯಾವುದಾದರೂ ಮನೆಯಲ್ಲಿ ಒಬ್ಬರೆ ಹೆಣ್ಣು ಮಗಳು ಇದ್ದಾಳೆ ಎಂದು ತಿಳಿದರೆ ಅವರ ಮನೆಗೆ ನುಗ್ಗಿ ಹೆಣ್ಣು ಮಗಳ ಮೇಲೆ ಅತ್ಯಾಚಾರ ಮಾಡುತ್ತಿದ್ದನು, ಈ ವಿಚಾರವಾಗಿ ಸದರಿ ಹೆಣ್ಣು ಮಕ್ಕಳು ಸಂಸಾರ ಹಾಳು ಆಗುತ್ತದೆ ಎಂದು ಯಾರಿಗೂ ಹೇಳಿಕೊಳ್ಳದೆ ಇದ್ದುದ್ದನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ. ನನ್ನ ಇನ್ನೊಬ್ಬ ತಮ್ಮ ಅಮೀನಸಾಬ ಒಬ್ಬ ಹೆಣ್ಣು ಮಗಳ ಮೇಲೆ ಅತ್ಯಾಚಾರ ಮಾಡಿದ ವಿಚಾರವಾಗಿ ಊರಿನವರು ಹೊಡೆದು ಆತನನ್ನು ಸಹ ಊರಿನಿಂದ ಹೊರಗೆ ಹಾಕಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಮತ್ತೊಬ್ಬ ತಮ್ಮ ಮೌಲಾಸಾಬ ಸಹ ಮಲ್ಲಪ್ಪ ಪೂಜಾರಿ ಎನ್ನುವವರ ಹೆಂಡತಿ ಜೊತೆಗೆ ಅಸಭ್ಯ ವರ್ತಿಸಿದ್ದರಿಂದ ಆತನಿಗೂ ಸಹ ಊರಿನ ಜನ ಹೊಡೆದಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ರಂಜಾನಸಾಬ ಬಸಮ್ಮ ಕುರಿ ಎನ್ನುವವಳ ಜೊತೆ ಅಸಭ್ಯವಾಗಿ ವರ್ತಿಸಿದ್ದರಿಂದ ಊರಿನವರು ಹೊಡೆದಿದ್ದರು ಎಂದರೆ ಸರಿಯಲ್ಲ.

3. ನಮ್ಮ ಊರಿನ ಕನಕದಾಸ ವೃತ್ತದಲ್ಲಿ ಸಾಮಾನ್ಯವಾಗಿ ರಾತ್ರಿ ಸಮಯದಲ್ಲಿ ಜನರ ಸಂಚಾರ ಇರುತ್ತದೆ ಎಂದರೆ ಸರಿ. 1 ನೇ ಆರೋಪಿತನ ಮನೆಯ ಅಕ್ಕಪಕ್ಕದಲ್ಲಿ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ಘಟನೆ ದಿನ ಮೃತ ಅಲ್ಲಾಸಾಬ ಮನೆಯಿಂದ ಸುಮಾರು 8-30 ಗಂಟೆಗೆ ಆಚೆ ಹೋಗಿರುತ್ತಾರೆ. ನಂತರ ನಾವು ಮೃತ ಅಲ್ಲಾಸಾಬನಿಗೆ ಪೋನ ಕರೆ ಮಾಡಿ ವಾಪಸ್ಸು ಮನೆಗೆ ಬರುವಂತೆ ಹೇಳಿರುವುದಿಲ್ಲ. ನನ್ನ ಅಳಿಯಂದಿರಾದ ಚಾಸಾ-14 ಮತ್ತು ಚಾಸಾ-15 ರವರು ನಮ್ಮ ಮನೆಗೆ ಬಂದು ನಮಗೆ ವಿಚಾರ ತಿಳಿಸಿದಾಗ ಅವರು ಕನಕದಾಸ ವೃತ್ತದಲ್ಲಿ ಇದ್ದೆವು ಎಂದು ತಿಳಿಸಿರುತ್ತಾರೆ. ಚಾಸಾ-14 ಮತ್ತು 15 ರವರ ಹತ್ತಿರ ಮೊಬೈಲ ಪೋನ ಇರುತ್ತವೆ. ನಮ್ಮ ಬಳಿಯೂ ಸಹ ಮೊಬೆಲ ಪೋನ ಇರುತ್ತವೆ

ಎಂದರೆ ಸರಿ. ಘಟನೆ ದಿನ ಚಾಸಾ-14 ಮತ್ತು 15 ರವರು ನಮಗೆ ಫೋನ ಕರೆ ಮಾಡಿ ಘಟನೆ ಬಗ್ಗೆ ತಿಳಿಸಿರುವುದಿಲ್ಲ, ಆದರೆ ಮನೆಗೆ ಬಂದು ತಿಳಿಸಿರುತ್ತಾರೆ. ರಾತ್ರಿ ಸುಮಾರು 10 ಗಂಟೆಗೆ ಚಾಸಾ-14 ಮತ್ತು 15 ರವರು ಮನೆಗೆ ಬಂದು ಅಲ್ಲಾಸಾಬ ರವರಿಗೆ ಹಲ್ಲೆ ಆಗುತ್ತಿದ್ದ ವಿಚಾರ ತಿಳಿಸಿರುತ್ತಾರೆ. ವಿಚಾರ ತಿಳಿದು ಸುಮಾರು 5 ನಿಮಿಷದಲ್ಲಿ 1 ನೇ ಆರೋಪಿ ಮನೆಯ ಬಳಿ ನಾವೆಲ್ಲರೂ ಹೋಗಿರುತ್ತೇವೆ. ನಾವು 1 ನೇ ಆರೋಪಿ ಮನೆ ಬಳಿ ಹೋದಾಗ ನಮ್ಮ ಊರಿನ ಕೆಲವರು ಸಹ 1 ನೇ ಆರೋಪಿಯ ಮನೆಯ ಬಳಿ ಇದದರು. ನಾವು 1 ನೇ ಆರೋಪಿ ಮನೆ ಬಳಿ ಹೋಗಿದ್ದಾಗ ಮನೆಯ ಬಾಗಿಲು ಒಳಗಿನಿಂದ ಹಾಕಲಾಗಿತ್ತು, ಆದರೆ ನನ್ನ ಅಳಿಯಂದಿರಾದ ಚಾಸಾ-14 ಮತ್ತು ಚಾಸಾ-15 ರವರು ಕನಕದಾಸ ವೃತ್ತದ ಬಳಿ ಇದ್ದಾಗ ಮನೆಯ ಬಾಗಿಲು ತೆಗೆದಿತ್ತು ಎಂದು ತಿಳಿಸಿರುತ್ತಾರೆ. 1 ನೇ ಆರೋಪಿಯ ಮನೆಯ ಬಾಗಿಲನ್ನು ನಾವು ಒಡೆದು ತೆಗೆಯಲು ಪ್ರಯತ್ನಿಸಿರುವುದಿಲ್ಲ. ಹಾಗೆಯೆ ಮನೆಯ ಕಿಟಕಿಯನ್ನು ಸಹ ಒಡೆಯಲು ಪ್ರಯತ್ನಿಸಿರುವುದಿಲ್ಲ. ಸದರಿ ಮನೆಯ ಕಿಟಕಿಯ ಬಳಿಯೂ ಸಹ ಊರಿನವರು ನಿಂತಿದ್ದರು.

4. ನಾವು 1 ನೇ ಆರೋಪಿ ಮನೆಯ ಕಿಟಕಿಯಿಂದ ನೋಡಿದಾಗ ನನ್ನ ತಮ್ಮ ಮೃತ ಅಲ್ಲಾಸಾಬ ಇನ್ನೂ ಜೀವಂತವಾಗಿದ್ದನು. ನಾವು ಮನೆಯ ಕಿಟಕಿಯಿಂದ ನೋಡಿದಾಗ ಅಲ್ಲಾಸಾಬ ದನದ ಕೊಟ್ಟಿಗೆಯಲ್ಲಿ ಬಿದ್ದಿದ್ದನು. ನಮ್ಮ ಅಳಿಯಂದಿರಾದ ಚಾಸಾ-14 ಮತ್ತು 15 ರವರು ನೋಡಿದಾಗ ಅಲ್ಲಾಸಾಬ ಪಡಸಾಲೆಯಲ್ಲಿ ಇದ್ದನು. ನಾವು ಕಿಟಕಿಯಿಂದ ಮನೆಯ ಒಳಗೆ ನೋಡಿದಾಗ, ಮನೆಯ ಒಳಗಡೆ ಆರೋಪಿತರಾದ 1 ನೇ ಆರೋಪಿ/ಗ್ಯಾನಪ್ಪ, 2 ನೇ ಆರೋಪಿ/ಚಂದ್ರಪ್ಪ, 3 ನೇ ಆರೋಪಿ/ಹನಮಪ್ಪ, 4 ನೇ ಆರೋಪಿ/ದ್ಯಾವಪ್ಪ, ಮತ್ತೊಬ್ಬ ಹನಮಪ್ಪ ಕರೆಪ್ಪ ಪೂಜಾರಿ, ಕರೆಪ್ಪ ಬಾಲಪ್ಪ ಪೂಜಾರಿ, ಯಲ್ಲವ್ವ ಚಂದ್ರಪ್ಪ ಪೂಜಾರಿ ಇದ್ದರು.

5. ನಾವು ಮನೆಯ ಕಿಟಕಿಯಿಂದ ಮನೆಯ ಒಳಗಡೆ ನೋಡಿದಾಗ ಸಲಾಕೆಯ ಕಾವು 1 ನೇ ಆರೋಪಿ/ಗ್ಯಾನಪ್ಪ ರವರ ಕೈಯಲ್ಲಿ ಇತ್ತು. ನಾವು ಸುಮಾರು ಒಂದು ಗಂಟೆಯ ಕಾಲ 1 ನೇ ಆರೋಪಿ ಮನೆಯ ಬಳಿ ಇದ್ದೆವು. ನಾವು ಪೊಲೀಸರಿಗೆ ಕರೆ ಮಾಡಿ ಸ್ಥಳಕ್ಕೆ ಬರುವಂತೆ ತಿಳಿಸಿಲ್ಲ ಆದರೆ ಅಲ್ಲಿಯೆ ಇದ್ದವರು ಪೊಲೀಸರಿಗೆ ಕರೆ ಮಾಡಿದಾಗ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ನಾವು ಒಂದು ಗಂಟೆ ಕಾಲ ಅಲ್ಲಿ ಇದ್ದಾಗ ಮನೆಯ ಬಾಗಿಲನ್ನು ಒಡೆದು ಒಳಗೆ ಹೋಗಿರುವುದಿಲ್ಲ. ರಾತ್ರಿ ಸುಮಾರು 11-30 ಗಂಟೆಗೆ ಪೊಲೀಸರ ವಾಹನ 1 ನೇ ಆರೋಪಿ ಮನೆಯ ಬಳಿ ಬಂದಿರುತ್ತದೆ. ಪೊಲೀಸರ ವಾಹನದ ಸೈರನ್ ಶಬ್ದ ಕೇಳಿ ಆರೋಪಿತರು ಮನೆ ಬಾಗಿಲನ್ನು ತೆರೆದು ಮನೆಯಿಂದ ಓಡಿ ಹೋಗಿರುತ್ತಾರೆ. ಸ್ಥಳದಲ್ಲಿ ಆರೋಪಿತರಿಗೆ ಸೇರಿದ ಸಂಬಂಧಿಕರು ಇದ್ದ ಕಾರಣದಿಂದ ನಾವು ಆರೋಪಿತರನ್ನು ಹಿಡಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. ಪೊಲೀಸರು ಆರೋಪಿತರು ಹಿಡಿಯಲು ಪ್ರಯತ್ನಿಸಿರುತ್ತಾರೆ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ನಂತರ ನಾವು ಮತ್ತು ಪೊಲೀಸರು 1 ನೇ ಆರೋಪಿಯ ಮನೆಯ ಒಳಗೆ ಹೋಗಿರುತ್ತೇವೆ. ನಾವು ಮನೆಯ ಒಳಗೆ ಹೋಗಿ ನೋಡಿದಾಗ ನನ್ನ ತಮ್ಮನ ಬಲಕೆನ್ನೆಯ ಮೇಲೆ ತಲೆಯ ಮೇಲೆ, ಮೈ-ಕೈ ಮೇಲೆ, ಬೆನ್ನಿನ ಮೇಲೆ ಗಾಯಗಳಾಗಿ ಮೃತಪಟ್ಟಿದ್ದನು. ನಾವು ನನ್ನ ತಮ್ಮನನ್ನು ಎತ್ತಿಕೊಂಡು ನೋಡಿದಾಗ ಆತನು ಮೃತಪಟ್ಟಿದ್ದನು. ಆ ಸಮಯದಲ್ಲಿ ಎರಡು ಕಟ್ಟಿಗೆಗಳು, ಸಲಾಕೆ ಮಾತ್ರ ಬಿದ್ದಿದ್ದವು.

6. ನಾವು ಕಿಟಕಿಯಿಂದ ನೋಡಿದಾಗ ಚಾಸಾ-6/ರೇಣವ್ವ ಮತ್ತು ಆಕೆಯ ಮಕ್ಕಳು ಸಹ ಮನೆಯಲ್ಲಿ ಇದ್ದರು ಮತ್ತು ಚಾಸಾ-6 ರೇಣವ್ವ ರವರಿಗೆ ತಲೆ ಮೇಲೆ ಪೆಟ್ಟಾಗಿತ್ತು. ಪೊಲೀಸರು ಸ್ಥಳಕ್ಕೆ ಬಂದಾಗ ನಾವು ತಕ್ಷಣವೆ ದೂರನ್ನು ನೀಡಿರುವುದಿಲ್ಲ, ನಂತರ ಪೊಲೀಸ ಠಾಣೆಗೆ ಹೋಗಿ ದೂರು ಸಲ್ಲಿಸಿರುತ್ತೇವೆ. ಸ್ಥಳದಲ್ಲಿ ದೂರು ಕೊಡಲು ನಮಗೆ ತೊಂದರೆ ಇರಲಿಲ್ಲ. ಸದರಿ ಸಮಯದಲ್ಲಿ ಸುಮಾರು 8-10 ಜನ ಪೊಲೀಸರು ಸ್ಥಳಕ್ಕೆ ಬಂದಿದ್ದರು ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ಪೊಲೀಸರು ಆ ಸಮಯದಲ್ಲಿ ಮೃತ

ಅಲ್ಲಾಸಾಬ ರವರ ಶವವನ್ನು ಸಾಗಿಸಲು ಪ್ರಯತ್ನಿಸಿರುವುದಿಲ್ಲ. ಪೊಲೀಸರು ನಮ್ಮನ್ನು ಸಹ ಮನೆಗೆ ಹೋಗುವಂತೆ ತಿಳಿಸಿರುತ್ತಾರೆ. ನಂತರ ಆರೋಪಿಯ ಮನೆಯಲ್ಲಿ ಬೇರೆ ಯಾರೂ ಜನರು ಇರಲಿಲ್ಲ ಆದರೆ ಪೊಲೀಸರು ಇದ್ದರು. ಚಾಸಾ-6 ರೇಣವ್ವ ರವರನ್ನು ಎಷ್ಟು ಗಂಟೆಗೆ ಆಸ್ಪತ್ರೆಗೆ ಪೊಲೀಸರು ಕರೆದುಕೊಂಡು ಹೋಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

7. ಚಾಸಾ-17/ಹಸನಸಾಬ ಅಲ್ಲಾಸಾಬ ನದಾಫ ಯಲಬುರ್ಗಾದಲ್ಲಿ ವಕೀಲಿ ವೃತ್ತಿ ಮಾಡುತ್ತಾರೆ ಎಂದರೆ ಸರಿ. ಸದರಿ ಚಾಸಾ-17 ರವರು ನನ್ನ ತಾಯಿಯ ತಮ್ಮನ ಮಗ ಇರುತ್ತಾರೆ. ಚಾಸಾ-17 ರವರು ಮರುದಿನ ಬೆಳಿಗ್ಗೆ 9 ಗಂಟೆಗೆ ಘಟನಾ ಸ್ಥಳಕ್ಕೆ ಬಂದಿರುತ್ತಾರೆ. ದೂರನ್ನು ನಮ್ಮ ಊರಿನಲ್ಲಿ ಗಣಕೀಕರಣ ಮಾಡಿಸಿರುತ್ತೇವೆ.

8. ನಿಪಿ-4/ಶವ ಪಂಚನಾಮೆ ಕಾಲಕ್ಕೆ ನಾನೂ ಸಹ ಸ್ಥಳದಲ್ಲಿ ಇದ್ದು, ಪೊಲೀಸರಿಗೆ ವಿಷಯವನ್ನು ಹೇಳಿ ಬರೆಸಿರುತ್ತೇವೆ. ಸದರಿ ಸಮಯದಲ್ಲಿ ಘಟನೆ ಬಗ್ಗೆ ತಿಳಿಸಿರುತ್ತೇವೆ. ನಿಪಿ-4 ಶವ ಪಂಚನಾಮೆ ಕಾಲದಲ್ಲಿ ಪೊಲೀಸರಿಗೆ ಕೊನೆಯ ಬಾರಿ ದಿಃ 10.01.2020 ರಂದು ರಾತ್ರಿ 9 ಗಂಟೆಗೆ ನೋಡಿರುತ್ತೇನೆ ಎಂದು ಹೇಳಿರುತ್ತೀರಾ ಎಂದರೆ ಸರಿಯಲ್ಲ. ಚಾಸಾ-15 ರವರು ನಮ್ಮ ಮನೆಗೆ ಬಂದು ಆರೋಪಿತರು 2 ನೇ ಆರೋಪಿ/ಚಂದ್ರಪ್ಪ ರವರ ಮನೆಯಲ್ಲಿ ಅಲ್ಲಾಸಾಬನಿಗೆ ಹೊಡೆಯುತ್ತಿದ್ದಾರೆ ಎನ್ನುವ ವಿಷಯ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿ ಈಗಲೂ ಸಹ 1 ನೆ ಆರೋಪಿ ವಾಸವಾಗಿರುವ ಮನೆಯನ್ನು 2 ನೇ ಆರೋಪಿ ಚಂದ್ರಪ್ಪ ರವರ ಮನೆ ಎಂದು ಕರೆಯುತ್ತಾರೆ ಎಂದು ನುಡಿಯುತ್ತಾರೆ. 1 ನೇ ಆರೋಪಿ ಮನೆಯನ್ನು 2 ನೇ ಆರೋಪಿ ಚಂದ್ರಪ್ಪ ರವರ ಮನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಮನೆ ಬಾಗಿಲನ್ನು ಒಳಗಿನಿಂದ ಹಾಕಿ ನನ್ನ ತಮ್ಮನನ್ನು ಹೊಡೆಯುವ ಶಬ್ಧ ಕೇಳಿಸುತ್ತಿತ್ತು ಎಂದು ದೂರಿನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಬಿಟ್ಟು ಇನ್ನೂ 4 ಜನ ಮನೆಯಲ್ಲಿ ಇದ್ದ ವಿಚಾರವನ್ನು ದೂರಿನಲ್ಲಿ

ಹೇಳಿರವುದಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಕಟ್ಟಿಗೆಯಿಂದ ನನ್ನ ತಮ್ಮ ಅಲ್ಲಾಸಾಬಗೆ ಹೊಡೆಯುತ್ತಿದ್ದರು ಹಾಗೂ ಉಳಿದ ಆರೋಪಿತರು ಕೈಗಳಿಂದ ಮತ್ತು ಕಾಲುಗಳಿಂದ ಹೊಡಿಬಡಿ ಮಾಡುತ್ತಿದ್ದರು ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಪೊಲೀಸ ವಾಹನದ ಸೈರನ್ ಶಬ್ಧ ಕೇಳಿ ಮನೆಯಿಂದ ಓಡಿ ಹೋದ ವಿಚಾರವನ್ನು ಸಹ ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

9. ನನ್ನ ತಮ್ಮ ಅಲ್ಲಾಸಾಬ 1 ನೇ ಆರೋಪಿತನ ಮನೆಗೆ ನೀರು ಕೇಳುವಂತೆ ಹೋಗಿ ಮನೆ ಒಳಗೆ ನುಗ್ಗಿ ಚಾಸಾ-6/ರೇಣುಕಾ ರವರ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಿಸಿದಾಗ ಚಾಸಾ-6/ರೇಣುಕಾ ನನ್ನ ತಮ್ಮ ಅಲ್ಲಾಸಾಬನಿಗೆ ನೂಕಿದಾಗ ಆತ ಕೆಳಗೆ ಬಿದ್ದು ಪೆಟ್ಟು ಮಾಡಿಕೊಂಡು ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ದನದ ಕೊಟ್ಟಿಗೆ ಇದ್ದ ಸ್ಥಳದಲ್ಲಿ ಒರಟು ಕಲ್ಲುಗಳು ಇದ್ದ ಕಾರಣದಿಂದ ತಲೆಗೆ ಪೆಟ್ಟಾಗಿ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಸಹ ಸಲಾಕೆ ಇರುತ್ತವೆ ಎಂದರೆ ಸರಿ. ನನ್ನ ತಮ್ಮ ಅಲ್ಲಾಸಾಬ ದೈಹಿಕವಾಗಿ ಸದೃಢನಿದ್ದನು ಎಂದರೆ ಸರಿ. ನನ್ನ ತಮ್ಮನ ಸಾವನ್ನು ದುರುಪಯೋಗ ಪಡಿಸಿಕೊಂಡು ಆರೋಪಿತರ ಮೇಲೆ ಸುಳ್ಳು ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಚಾಸಾ-14 ಮತ್ತು 15 ರವರು ನಮ್ಮ ಮನೆಗೆ ಬಂದು ಆರೋಪಿತರು ಅಲ್ಲಾಸಾಬನಿಗೆ ಹೊಡೆಯುತ್ತಿದ್ದ ವಿಚಾರ ನಮಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವು 1 ನೇ ಆರೋಪಿ ಮನೆ ಬಳಿ ಹೋಗಿರುವುದಿಲ್ಲ ಹಾಗೂ ಯಾವುದೇ ಘಟನೆಯನ್ನು ಮನೆ ಕಿಟಕಿಯಿಂದ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಾವು ಆರೋಪಿತರಿಗೆ ಅಲ್ಲಾಸಾಬನನ್ನು ಬಿಟ್ಟುಬಿಡುವಂತೆ ಕೇಳಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಆ ಸಮಯದಲ್ಲಿ ಮನೆಯ ಒಳಗಿನಿಂದ ನಿಮ್ಮ ಮನೆ ಹೆಣ್ಣು ಮಕ್ಕಳಿಗೆ ಈ ರೀತಿ ಮಾಡಿದರೆ ಸುಮ್ಮನಿರುತ್ತಿದ್ದೀರಾ ಮಕ್ಕಳೆ ಎಂದು ಅವಾಚ್ಯವಾಗಿ ಬೈದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಅಲ್ಲಾಸಾಬನಿಗೆ ಸಲಿಕೆಯಿಂದ ಹಾಗೂ 2 ಮತ್ತು 3 ನೇ

ಆರೋಪಿತರು ಕಟ್ಟಿಗೆಯಿಂದ ಹೊಡೆದಿರುತ್ತಾರೆ ಹಾಗೂ ಉಳಿದ ಆರೋಪಿತರು ಕೈ-ಕಾಲುಗಳಿಂದ ಹೊಡಿಬಡಿ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ-1 ದೂರನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಪೊಲೀಸರು  ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಮತ್ತು ಸ್ಥಳದಿಂದ ಯಾವುದೆ ವಸ್ತುಗಳನ್ನು ಸಂಗ್ರಹಿಸಿರುವುದಿಲ್ಲ ಎಂದರೆ ಸರಿಯಲ್ಲ. ದೂರನ್ನು ದಾಖಲಿಸುವ ಸಮಯದಲ್ಲಿ ಕರಿಯಪ್ಪ ಬಾಳಪ್ಪ ಪೂಜಾರಿ, ಹನಮಪ್ಪ ಕರಿಯಪ್ಪ ಪೂಜಾರಿ ರವರ ಹೆಸರುಗಳನ್ನು ಹೇಳಿರುವುದಿಲ್ಲ, ನಂತರ ನನ್ನ ಮರು ಹೇಳಿಕೆಯಲ್ಲಿ ಅವರ ಹೆಸರುಗಳನ್ನು ಹೇಳಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಘಟನೆಯನ್ನು ನೋಡದೆ ಇದ್ದರೂ ಸಹ ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

**(1 ನೇ ಆರೋಪಿ ಪರ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ)**

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.